## **ಹಿರಿಯ ಸಿವಿಲ್ ನ್ಯಾಯೀಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂಧನೂರು**

**MVC No.533/2021** **RW.2**

| | | |
|---|---|---|
| ಹೆಸರು | ಃ | ಡಾಃ ಬಂದೇನವಾಜ |
| ತಂದೆಯ ಹೆಸರು | : | ರಾಜಾಸಾಬ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಬಾಲಂಕು ಆಸ್ಪತ್ರೆ ವೈದ್ಯರು |
| ವಾಸಸ್ಥಳ | : | ರಾಯಚೂರು |

**(ಇಂದು ದಿನಾಂಕ:24-11-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ: ಎದುರುದಾರ ನಂ.3 ರವರ ಪರ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ದಿಃ 19-11-2020 ರಂದು ಸಂಜೆ 7.30 ಗಂಟೆಗೆ ವಿಶ್ವನಾಥ ರೆಡ್ಡಿ ಎನ್ನುವವರು ಬಸನಗೌಡ ತಂದೆ ಶರಣಪ್ಪಗೌಡ ಇವರನ್ನು ಮಧ್ಯಾಹ್ನ 2-00 ಗಂಟೆಗೆ ಅಪಘಾತವಾಗಿರುತ್ತದೆ ಅಂತಾ ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ನಮ್ಮ ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿಯವರ ಪ್ರಥಮ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆಯನ್ನು ಮಾಡಿರುತ್ತೇನೆ. ದಿಃ 25-11-2020 ರವರೆಗೆ ಅವರು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿದ್ದರು. ನಂತರ ದಿಃ 25-11-2020 ರಂದು ಬಿಡುಗಡೆಗೊಂಡಿರುತ್ತಾರೆ.

ಆಸ್ಪತ್ರೆಗೆ ಬಂದಾಗ ಅವರ ತಲೆಯಲ್ಲಿ ರಕ್ತ ಹೆಪ್ಪುಗಟ್ಟಿತ್ತು ಮತ್ತು ತಲೆಯ ಬಲಭಾಗಕ್ಕೆ ಭಾರಿಗಾಯಗಳಾಗಿದ್ದವು.

ಸದರಿ ಬಸನಗೌಡ ಇವರ ಚಿಕಿತ್ಸೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಆರ್-9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದ.**

ನಿಪಿ-5 ಗಾಯದ ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಇರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು